Indian Journal of History and Archaeology

ISSN (E): 2582-225X
Vol-1 Issue 4, NOV-DEC, 2019,. 16-26

# ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಜೈನ ಪರಂಪರೆ

ಡಾ.ಹೆಚ್.ಎನ್. ಕಾಳಸ್ವಾಮಿ

ಹೆಗ್ಗಡದೇವನಕೋಟೆ ಪ್ರದೇಶದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ವಿಕಾಸದ ಚಾರಿತ್ರಿಕ ಬೆಳವಣಿಗೆಯಲ್ಲಿ ಜೈನಧರ್ಮದ ಪಾತ್ರ ಹಾಗೂ ಪ್ರಭಾವ ಅತ್ಯಂತ ಪ್ರಮುಖವಾದುದು. ಇದಕ್ಕೆ ಸಂಬಂಧಿಸಿದ ಚಾರಿತ್ರಿಕ ದಾಖಲೆಗಳು ಹೇರಳವಾಗಿ ಲಭ್ಯವಾಗಿವೆ. ದಕ್ಷಿಣ ಭಾರತದ ಪ್ರಮುಖ ಹಾಗೂ ಸುಪ್ರಸಿದ್ಧ ಜೈನ ಕ್ಷೇತ್ರವಾದ ಶ್ರವಣಬೆಳಗೊಳದ ಸೆರಗಿನಲ್ಲಿಯೇ ಇರುವ ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಕಂಡುಬರುವ ಕೀರ್ತಿಪುರ ಅಥವಾ ಕಿತ್ತೂರು ಸಹ ಒಂದು ಪ್ರಮುಖ ಜೈನ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತೆಂಬುದು ಇಲ್ಲಿ ಸ್ಮರಣೀಯ ಸಂಗತಿಯಾಗಿದೆ. ತನ್ಮೂಲಕ ದಕ್ಷಿಣ ಭಾರತದ ಭೌಗೋಳಿಕ ಆಯಕಟ್ಟಿನ ಪ್ರದೇಶವಾಗಿರುವ ಹೆಗ್ಗಡದೇವನಕೋಟೆಯು ತಮಿಳುನಾಡು, ಕೇರಳ ಮುಂತಾದ ನೆರೆಯ ರಾಜ್ಯಗಳಲ್ಲಿರುವ ಜೈನ ಕ್ಷೇತ್ರಗಳು ಮತ್ತು ಶ್ರವಣಬೆಳಗೊಳದ ನಡುವೆ ಸಂಪರ್ಕಗಳೇರ್ಪಡಲು ಸಾಂಸ್ಕೃತಿಕ ಕೊಂಡಿಯಾಗಿ ನಿರ್ಣಾಯಕ ಪಾತ್ರವಹಿಸಿದೆ.[1]

ದಕ್ಷಿಣ ಕರ್ನಾಟಕದಲ್ಲಿ ಜೈನ ಧರ್ಮವು ವಿಶೇಷವಾಗಿ ಪ್ರಗತಿ ಹೊಂದಲು ಕಾರಣವಾದುದು ರಾಜಕೀಯ ಪ್ರೋತ್ಸಾಹ. ಅದರಲ್ಲೂ ಮುಖ್ಯವಾಗಿ ತಲಕಾಡು ಗಂಗರು ಮತ್ತು ದ್ವಾರಸಮುದ್ರದ ಹೊಯ್ಸಳರ ಕಾಲದಲ್ಲಿ ಜೈನ ಧರ್ಮವು ದಕ್ಷಿಣ ಕರ್ನಾಟಕದ. ಕಾವೇರಿ ಕಪಿಲಾ ನದಿಗಳ ಮುಖಜಃ ಭೂಮಿಯಲ್ಲಿ ಸಾಕಷ್ಟು

ತೀವ್ರಗತಿಯಲ್ಲಿ ಮತ್ತು ವ್ಯಾಪಕವಾಗಿ ಬೆಳವಣಿಗೆಯನ್ನು ಸಾಧಿಸಿತ್ತೆಂದರೆ ತಪ್ಪಾಗಲಾರದು ಈ ಎರಡು ಪ್ರಮುಖ ರಾಜಕೀಯ ಸಂತತಿಗಳು ಹೆಗ್ಗಡದೇವನಕೋಟೆ ಪ್ರದೇಶದ ಬಹುಭಾಗಗಳ ಮೇಲೆ ತಮ್ಮ ರಾಜಕೀಯ ಪರಮಾಧಿಕಾರವನ್ನು ಸ್ಥಾಪಿಸಿದ್ದು. ಸಹಜವಾಗಿ ಈ ಪ್ರದೇಶದಲ್ಲಿ ಜೈನ ಧರ್ಮದ ಹರಡುವಿಕೆ ಮತ್ತು ಬೆಳವಣಿಗೆಗೆ ಕಾರಣವಾಗಿದ್ದವು. ಇದಕ್ಕೆ ಆಧಾರವಾಗಿ ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಕಂಡುಬರುವ ಅನೇಕ ಜೈನ ಬಸದಿಗಳು ಹಾಗೂ ತೀರ್ಥಂಕರರ ವಿಗ್ರಹಗಳು ಸಾಕ್ಷಿಯಾಗಿವೆ. ಕಿತ್ತೂರು, ಕಳಸೂರು, ಮಸಹಳ್ಳಿ, ಚೆನ್ನಹಳ್ಳಿ, ಸರಗೂರು, ಭೀಮನಕೊಲ್ಲಿ ಮೊದಲಾದ ಕಡೆಗಳಲ್ಲಿರುವ ಜೈನ ದೇವಾಲಯಗಳ ಸಮೂಹಗಳು ಮತ್ತು ತೀರ್ಥಂಕರರ ಮೂರ್ತಿಗಳು ಅಮೂಲ್ಯವಾದ ಮತ್ತು ಜೀವಂತ ಸಾಕ್ಷಿಯಾಗಿ ಇಂದಿಗೂ ಕಂಗೊಳಸುತ್ತಿವೆ.

ಹೆಗ್ಗಡದೇವನಕೋಟೆ ಪ್ರದೇಶದ ವಿವಿಧ ಜೈನ ಧರ್ಮದ ಕೇಂದ್ರಗಳು ಮತ್ತು ಬಸದಿಗಳಿಗೆ ವಿವಿಧ ರಾಜಸಂತತಿಗಳು, ಅಧಿಕಾರಸ್ತರು, ಶ್ರೀಮಂತ ವರ್ತಕರು ನೀಡಿರುವ ದಾನ ದತ್ತಿಗಳ ಬಗ್ಗೆ ಮಾಹಿತಿಗಳನ್ನೊದಗಿಸುವ ಶಾಸನನಾಧಾರಗಳನ್ನು ತೀವ್ರತರದ ಅಧ್ಯಯನಕ್ಕೊಳ ಪಡಿಸುವುದರ ಮೂಲಕ ಈ ಪ್ರದೇಶದ ಜೈನ ಪರಂಪರೆಯ ಬೆಳವಣಿಗೆಯ ಇತಿಹಾಸವನ್ನು ಗುರುತಿಸಬಹುದು. ಮೊದಲಿಗೆ ಗಂಗರ ಕಾಲದಲ್ಲಿ ಈ ಪ್ರದೇಶದಲ್ಲಾದ ಜೈನ ಧರ್ಮದ ಬೆಳವಣಿಗೆಯನ್ನು ಕುರಿತು ಚರ್ಚಿಸಲಾಗಿದೆ. ತಲಕಾಡಿನ ಗಂಗ ಸಂತತಿಯ ಅನೇಕ ರಾಜರು ಜೈನ ಮತೀಯರೆಂದು ಹಾಗೂ ಈ ಸಂತತಿಯ ಸ್ಥಾಪಿಸಿದರೆಂದೂ ನಂಬಲಾಗಿತ್ತು. ಆದರೆ ಇತ್ತೀಚಿನ ಸಂಶೋಧನೆಗಳು ಈ ನಂಬಿಕೆಯನ್ನು ಸಮರ್ಥಿಸುವುದಿಲ್ಲ. ಆದರೆ ಕ್ರಿ.ಶ. ೮೧೦ರ ಸುಮಾರಿನಲ್ಲಿ ಇಮ್ಮಡಿ ಶಿವಮಾರನು ಜೈನ ಮತಕ್ಕೆ ಪರಿವರ್ತಿತನಾದ ಘಟನೆಯು ಅತ್ಯಂತ ಮಹತ್ವವಾಗಿದೆ. ಅಂದಿನಿಂದ ಕೊನೆಯವರೆಗೂ ಆಳಿದ ಈ ಸಂತತಿಯ ಅನೇಕ ರಾಜರು ಜೈನ ಮತಾವಲಂಭಿಗಳಾಗಿದ್ದರೆಂಬುದು ಬಹಳ ಗಮನಾರ್ಹ.

ಗಂಗರ ಕಾಲದಲ್ಲಿ ಜೈನ ಕ್ಷೇತ್ರವಾಗಿದ್ದ ಶ್ರವಣಬೆಳಗೊಳವು ಅಖಿಲ ಭಾರತದಲ್ಲಿಯೇ ಅತೀ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು. ಅಲ್ಲಿ ಕ್ರಮೇಣ ಹೆಚ್ಚಿನ ಸಂಖ್ಯೆಯಲ್ಲಿ ಬಸದಿಗಳು ನಿರ್ಮಾಣವಾದವು. ಗಂಗವಾಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೈನ ಧರ್ಮವು ವ್ಯಾಪಕವಾಗಿ ಪ್ರಸಾರವಾಯಿತು. ಗಂಗರ ಆಶ್ರಯದಲ್ಲಿ ಅನೇಕ ವಿದ್ವಾಂಸರು ಜೈನ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳನ್ನು ರಚಿಸಿದರು. ಗಂಗರು ಹಿಂದೂ ಧರ್ಮೀಯರಾಗಿದ್ದರೂ ಜೈನ ಧರ್ಮವನ್ನು ಉದಾರವಾಗಿ ಪೋಷಿಸಿದರು ಶಬ್ದಾವತಾರದ ಕರ್ತೃವಾದ ಪೂಜ್ಯಪಾದ ಜೈನ ಆಚಾರ್ಯನು ಗಂಗರ ಸುಪ್ರಸಿದ್ಧ ಪ್ರಭುಗಳಲ್ಲೊಬ್ಬನಾಗಿದ್ದ ದುರ್ವಿನೀತನ ಆಸ್ಥಾನದಲ್ಲಿ ಹಲವು ಕಾಲ ಇದ್ದುದಾಗಿ ತಿಳಿದುಬರುತ್ತದೆ.

ಕೊನೆಯ ಗಂಗ ಅರಸರ ಕಾಲದಲ್ಲಿ ಅಮಾತ್ಯನಾಗಿದ್ದ ಚಾವುಂಡರಾಯನು ತಾನೇ ಸ್ವತಃ ವಿದ್ವಾಂಸನಾಗಿದ್ದುದಲ್ಲದೆ, ವಿದ್ವಾಂಸರಿಗೆ ವಿಶೇಷ ಮನ್ನಣೆ ನೀಡಿದನು. ಅವನು ಕ್ರಿ.ಶ. ೯೮೨ರಲ್ಲಿ ಶ್ರವಣಬೆಳಗೊಳದ ಜಗತ್ಪ್ರಸಿದ್ಧ ಗೊಮ್ಮಟ ಮೂರ್ತಿಯನ್ನು ಅಖಂಡ ಏಕಶಿಲೆಯಲ್ಲಿ ಕೆತ್ತಿಸಿದನು. ಚಾವುಂಡರಾಯನನ್ನು ಕನ್ನಡ ನಾಡಿನಲ್ಲಿ ಜೈನಧರ್ಮದ ಅಭ್ಯುದಯದ ಅಗ್ರಮಾನ್ಯತ್ರಯರಲ್ಲಿ ಪ್ರಪ್ರಥಮನೆಂದು ಅನೇಕ ಶಾಸನಗಳಲ್ಲಿ ಹೆಸರಿಸಲಾಗಿದೆ. ಕ್ರಿ.ಶ. ಒಂಭತ್ತು ಮತ್ತು ಹತ್ತನೇ ಶತಮಾನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಂಗವಾಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೈನ ಬಸದಿಗಳು ನಿರ್ಮಾಣಗೊಂಡವು.[2] ಹೀಗೆ ಗಂಗರ ಕಾಲದಲ್ಲಿ ಜೈನಧರ್ಮವು ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಪ್ರಸಾರಗೊಂಡು, ಮುಂದೆ ಹೊಯ್ಸಳರ ಯುಗದಲ್ಲಿ ಸಾಕಷ್ಟು ಜನಪ್ರಿಯವಾಗಿತ್ತೆಂಬುದರಲ್ಲಿ ಯಾವುದೇ ಉತ್ಪ್ರೇಕ್ಷೆಯಿಲ್ಲ.

ತಲಕಾಡಿನ ಗಂಗರ ತರುವಾಯ ಕರ್ನಾಟಕದ ದಕ್ಷಿಣ ಭಾಗದಲ್ಲಿ ಪ್ರಮುಖ ರಾಜಮನೆತನವಾಗಿ ಬೆಳೆದು ದಕ್ಷಿಣ ಭಾರತದಾದ್ಯಂತ ತಮ್ಮ ಪರಮಾಧಿಕಾರವನ್ನೊಳಗೊಂಡ ಸಾಮ್ರಾಜ್ಯವನ್ನು ಸ್ಥಾಪಿಸಿದ ಹೊಯ್ಸಳ ಸಂತತಿಯು, ಓರ್ವ ಜೈನಮುನಿಯ ಪ್ರೋತ್ಸಾಹ ಹಾಗೂ ಪ್ರಭಾವದಿಂದಲೇ ಅಸ್ತಿತ್ವಕ್ಕೆ ಬಂದಿತ್ತೆಂದು ಬಣ್ಣಿಸಲಾಗಿದೆ. ಪ್ರಾರಂಭದಿಂದ ವಿಷ್ಣುವರ್ಧನನ ಕಾಲದವರೆಗಿನ ಹೊಯ್ಸಳ ರಾಜರು ಜೈನ ಮತೀಯರಾಗಿದ್ದರು. ವಿಷ್ಣುವರ್ಧನನು ಶ್ರೀರಾಮಾನುಜರಿಂದ ವೈಷ್ಣವ ಮತ ಸ್ವೀಕರಿಸಿದ ಅನಂತರದಲ್ಲಿ ಹೊಯ್ಸಳ ರಾಜರು ವೈದಿಕ ಧರ್ಮಾವಲಂಭಿಗಳಾಗಿದ್ದರೂ ಜೈನ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು.

ವಿಷ್ಣುವರ್ಧನನ ಪ್ರಧಾನಾಮಾತ್ಯ ಮತ್ತು ಪ್ರಧಾನ ದಂಡನಾಯಕ ಗಂಗರಾಜ ಹಾಗೂ ಇತರ ದಂಡನಾಯಕರಾದ ಪುಣಿಸಿಮಯ್ಯ, ಚೋಕಿಮಯ್ಯ, ಹುಲ್ಲ ಮೊದಲಾದವರು ಪ್ರಸಿದ್ಧ ಜೈನ ಮತಾವಲಂಭಿಗಳು.[3] ಇವರನ್ನು ಗಂಗರ ಚಾವುಂಡರಾಯನ ನಂತರ ಜೈನ ಧರ್ಮದ ನಿಷ್ಠಾವಂತ ಹಾಗೂ ಪ್ರಖ್ಯಾತ ಅನುಯಾಯಿಗಳಾಗಿದ್ದರೆಂದು ಅಭಿಪ್ರಾಯಪಡಲಾಗಿದೆ.[4] ಇವರ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯದಲ್ಲಿ ನೂರಾರು ಬಸದಿಗಳು ಸ್ಥಾಪನೆಯಾದರೆ. ಹಳೆಯ ಬಸದಿಗಳು ದುರಸ್ತಿಯಾದವು. ಹೊಯ್ಸಳರ ನಂತರದ ಅವಧಿಯಲ್ಲಿ ದಂಡನಾಯಕರು, ಅಧಿಕಾರಿಗಳು, ವರ್ತಕರು ಮೊದಲಾದವರು ಜೈನ ಬಸದಿಗಳನ್ನು ನಿರ್ಮಿಸಿ ಇಲ್ಲವೆ ದುರಸ್ಥಿಗೊಳಿಸಿ, ಭೂದಾನ ಮತ್ತು ಅನುದಾನಗಳನ್ನು ನೀಡುವುದರ ಮೂಲಕ ಜೈನ ಧರ್ಮದ ಪ್ರಗತಿಗೆ ಕಾರಣರಾದರು. ಈ ಹಿನ್ನೆಲೆಯಲ್ಲಿ ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ ೨೦ಕ್ಕೂ ಅಧಿಕ ಶಾಸನಗಳು ಎಪಿಗ್ರಾಫಿಯಾ ಕರ್ನಾಟಕ ಸಂಪುಟ–೩ರಲ್ಲಿ ಪ್ರಕಟವಾಗಿವೆ.[5] ಉದಾಹರಣೆಗೆ : ಹೆ. ಕೋ. ೬೩ನೇ ಹೆಬ್ಬಲಗುಪ್ಪೆಯ ಶಾಸನದಲ್ಲಿ ನಾರಾಯಣ ಪೆರುನ್ತಚ್ಚನ್‌ರವರು ನಿರ್ಮಿಸಿದ ದುಗ್ಗಮಾರ ಬಸದಿಗೆ ನರಸೀಗೆರೆ ಅಪ್ಪೊರ್ ನೀಡಿದ ಆರು ಖಂಡುಗ ಬಿತ್ತುವ

ಭೂದಾನ ಮತ್ತು ಗೊಯ್ಯಿನ್ದಮ್ಮ ಎಂಬುವವರು ನೀಡಿದ ಆರು ಖಂಡುಗ ಬಿತ್ತುವ ನೀರಾವರಿ ಭೂಮಿಯ ಭೂದಾನಗಳನ್ನು ನೀಡಿರುವುದು ಕಂಡುಬರುತ್ತದೆ.[6]

ಹೆಗ್ಗಡದೇವನಕೋಟೆ ಪ್ರದೇಶದ ಪ್ರಸಿದ್ಧ ಜೈನ ಕೇಂದ್ರವಾದ ಕಿತ್ತೂರಿನಲ್ಲಿರುವ ಶ್ರೀ ಪಾರ್ಶ್ವನಾಥಸ್ವಾಮಿಯವರಿಗೆ ಅರಮನೆ ಲಕ್ಷ್ಮೀಪತಿ ಪಂಡಿತರವರ ಧರ್ಮಪತ್ನಿಯವರಾದ ಲಕ್ಷ್ಮೀಮಂತ್ಯಂಮನವರು ಚೌರಿಗೆ, ಪಾತ್ರಪದಾರ್ಥಗಳನ್ನು ದಾನ ನೀಡಿರುವುದು ಹೆ.ಕೋ. 127ನೇ ಕಿತ್ತೂರು ಶಾಸನದಲ್ಲಿ ದಾಖಲಾಗಿದೆ.[7] ಹೆ.ಕೋ. 128ನೇ ಕಿತ್ತೂರು ಶಾಸನದ ಪ್ರಕಾರ ಕಿತ್ತೂರು ವಿಜಯಪಾರ್ಶ್ವನಾಥ ಸ್ವಾಮಿಗೆ ಬೆಳುಕೆರೆ ಶಾಂತಪಂಡಿತರ ಧರ್ಮಪತ್ನಿ ದೇವಂಮ್ಮ ನೀಡಿದ ಚೌರಿಗೆ ದಾನದ ಬಗೆಗೆ ವಿವರಣೆಯಿದೆ.[8] ಅದೇ ಬಸದಿಗೆ ಕೊಳಗದಪ್ಪಲೆಯನ್ನು ದಾನ ನೀಡಿದ ಶ್ರೀ ಬಿಳಿಕೆರೆ ದೇವರಾಜೈಯರ ಬಗೆಗೆ ಹೆ.ಕೋ. 129ನೇ ಶಾಸನದಲ್ಲೂ.[9] ಜಿನ್ನೈನವರ ಧರ್ಮಪತ್ನಿ ಜಯಾವತ್ತಿ ಅಮ್ಮನವರು ನೀಡಿದ ಹಿತ್ತಾಳೆ ತಟ್ಟೆಯ ದಾನದ ಬಗೆಗೆ ಹೆ.ಕೋ.130ನೇ ಕಿತ್ತೂರು ಶಾಸನದಲ್ಲಿಯೂ ಕಂಡುಬರುತ್ತದೆ.[10] ಕ್ರಿ.ಶ. 12ನೇ ಶತಮಾನಕ್ಕೆ ಸೇರಿದ ಕಿತ್ತೂರಿನ ಬಸದಿಯ ಮೂಲದೇವರಾದ ವಿಜಯ ಪಾರ್ಶ್ವನಾಥಸ್ವಾಮಿ ವಿಗ್ರಹದ ಪಾದದ ಕೆಳಗಿರುವ ಹೆ.ಕೋ. 131ನೇ ಶಾಸನದ ಪ್ರಕಾರ ಶ್ರೀ ಮೂಲಸಂಘ ಕಾನೂರ್ಗಣ ತಿಂತ್ರಿಣಿಗಚ್ಛ ಕುಂದಕುಂದಾನ್ವಯ ಸುಪೂಜ್ಯದೇವ ಪುಷ್ಪ ಯವತಿಯತಿಯವರು ಪಾರ್ಶ್ವನಾಥ ಬಸದಿಯಲ್ಲಿ ವಿಜಯನಾಥ ಸ್ವಾಮಿಯನ್ನು ಪ್ರತಿಷ್ಠಾಪಿಸುವುದರ ಬಗ್ಗೆ ವ್ಯಕ್ತವಾಗುತ್ತದೆ.[11]

ಹತ್ತೊಂಬತ್ತನೆ ಶತಮಾನಕ್ಕೆ ಸೇರಿದ ಹೆ.ಕೋ.132ನೇ ಶಾಸನದಲ್ಲಿ ಹುರದ ಅಂಗರಾಜವೊಡೆಯ ಕೊಟ್ಟಿರುವ ದಾನದ ಬಗ್ಗೆ ಮಾಹಿತಿಯಿದೆ.[12] ಹೆ.ಕೋ. 12ನೇ ಕೊತ್ತಗಾಲ ಶಾಸನದ ಪ್ರಕಾರ ಹಾಳಾಗಿದ್ದ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿ, ಅದನ್ನು ಸರಿಪಡಿಸಿ ಅಲ್ಲಿ ಪೂಜೆಪುನಸ್ಕಾರಗಳು ಸಾಂಗ್ಯವಾಗಿ ನಡೆದುಕೊಂಡು ಹೋಗಲು ಏರ್ಪಾಡು ಮಾಡಿದ ಕರಿಜಯನ ಮಲ್ಲಪ್ಪಂಗೆ ಧಾರಾಪೂರ್ವಕವಾಗಿ ಬಿಟ್ಟ ಗದ್ದೆಬೆದ್ದಲು ಭೂದಾನದ ಬಗ್ಗೆ ಕಂಡುಬರುತ್ತದೆ.[13] ಸಿ. ಹಯವದನರಾವ್ ಅಭಿಪ್ರಾಯಪಟ್ಟಿರುವ ಪ್ರಕಾರ ಹೆಗ್ಗಡದೇವನಕೋಟೆ ಪ್ರದೇಶದ ಮಳಲಿ ಎಂಬ ಊರಿನಲ್ಲಿ ಎರಡು ಪ್ರಮುಖ ಬಸದಿಗಳಿರುವುದಲ್ಲದೆ. ಹೆಚ್ಚಿನ ಸಂಖ್ಯೆಯಲ್ಲಿ ಜೈನರು ವಾಸವಾಗಿದ್ದರು.[14] ಈಗಲೂ ಸಹ ಹೆಗ್ಗಡದೇವನಕೋಟೆ, ಸರಗೂರು, ಹ್ಯಾಂಡ್‌ಪೋಸ್ಟ್ (ಎರಹಳ್ಳಿ ಕಾವಲ್) ಮುಂತಾದ ನಗರಪಟ್ಟಣಗಳಲ್ಲಿ ರಾಜಸ್ಥಾನದಿಂದ ವಲಸೆ ಬಂದಿರುವ ಮಾರ್ವಾಡಿ ಜೈನರು ಅಲ್ಲಲ್ಲಿ ವಾಸವಾಗಿದ್ದಾರೆ.[15]

ಮೇಲ್ಕಂಡ ಶಾಸನಗಳನ್ನು ಪರೀಕ್ಷಿಸಿದಾಗ ತಿಳಿದು ಬರುವುದೇನೆಂದರೆ ಹೆಗ್ಗಡದೇವನ ಕೋಟೆ ಪ್ರದೇಶದ ಕಿತ್ತೂರಿನಲ್ಲಿ ಹೆಚ್ಚಿನ ಬಸದಿಗಳು ಸ್ಥಾಪನೆಗೊಂಡಿದ್ದು, ಹಲವು ಜನರು ಮೊದಲಾದ ರೂಪದಲ್ಲಿ ದಾನ ನೀಡಿರುವುದು ದಾಖಲಾಗಿವೆ. ಇದರಿಂದ ಕಿತ್ತೂರು ಪ್ರಮುಖ ಜೈನ ಕೇಂದ್ರವಾಗಿದ್ದು. ಆ ಕಾಲದಲ್ಲಿ

ಶ್ರವಣಬೆಳಗೊಳದಂತೆ ಕೀರ್ತಿಪುರ ಪಟ್ಟಣವೂ ಸಹ ಆಡಳಿತಾತ್ಮಕ ರಾಜಧಾನಿ ಮಾತ್ರವಾಗಿರದೆ, ಜೈನಧರ್ಮದ ಪ್ರಮುಖ ಕೇಂದ್ರ ಹಾಗೂ ಜೈನ ಧರ್ಮದ ವಾಸ್ತುಶಿಲ್ಪಗಳನ್ನೊಳಗೊಂಡ ಕಲಾ ನಗರವೂ ಆಗಿತ್ತೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದುದರಿಂದಲೇ ಮೌರ್ಯ ಸಾಮ್ರಾಜ್ಯ ಸ್ಥಾಪಕನಾದ ಚಂದ್ರಗುಪ್ತ ಮೌರ್ಯನು ತನ್ನ ಗುರು ಹಾಗೂ ಜೈನ ಧರ್ಮದ ಮುನಿ ಭದ್ರಬಾಹುವಿನೊಂದಿಗೆ ದಕ್ಷಿಣ ಭಾರತಕ್ಕೆ ಬಂದಿದ್ದಾಗ ಶ್ರವಣಬೆಳಗೊಳದ ಭೇಟಿಯ ನಂತರ ಪುನ್ನಾಟ ರಾಜ್ಯದ ರಾಜಧಾನಿ ಕಿತ್ತೂರಿಗೂ ಸಹ ಭದ್ರಬಾಹು ತನ್ನ ಶಿಷ್ಯರೊಂದಿಗೆ ಭೇಟಿ ನೀಡಿದ್ದನೆಂಬುದು ತಿಳಿದಿರುವ ವಿಚಾರವೇ ಆಗಿದೆ.[16]

ಪ್ರಸಿದ್ಧ ಪುನ್ನಾಟ ಸಂಘವೆಂಬ ಜೈನ ಸಂಘವು ಕಿತ್ತೂರಿನಲ್ಲಿ ಅಸ್ತಿತ್ವದಲ್ಲಿತ್ತೆಂಬುದನ್ನು ಕುರಿತಾಗಿ ಈಗಾಗಲೇ ಮೊದಲನೇ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಇಂತಹ ಪ್ರಮುಖ ರಾಜಕೀಯ, ಧಾರ್ಮಿಕ, ವ್ಯಾಪಾರ ಹಾಗೂ ಕಲಾ ಕೇಂದ್ರವಾಗಿದ್ದ ಕಿತ್ತೂರು ಅಥವಾ ಕಿತ್ತಿಪುರ ಅಥವಾ ಕೀರ್ತಿಪುರ 1972ರಲ್ಲಿ ಕಬಿನಿ ನದಿಗೆ ನಿರ್ಮಿಸಲಾದ ಆಧುನಿಕ ಹಾಗೂ ದೊಡ್ಡ ಅಣೆಕಟ್ಟೆಯ ನಿರ್ಮಾಣದಿಂದಾಗಿ ಕಪಿಲಾ ನದಿಯ ಹಿನ್ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ಹೋಗಿದೆ. ಕಿತ್ತೂರು ಮುಳುಗಡೆಯಾದಾಗ ಅಲ್ಲಿನ ಜನರು ತಮ್ಮ ಮನೆಮಠ, ಜಾನುವಾರು, ಆಸ್ತಿಪಾಸ್ತಿ ಮೊದಲಾದವುಗಳೊಡನೆ ಸಮೀಪದಲ್ಲೇ ಇರುವ ಹಾಗೂ ಎತ್ತರವಾದ ಪ್ರದೇಶದಲ್ಲಿ ತೆರಣಿಮಂಟಿಯಲ್ಲಿ ವಾಸ್ತವ್ಯ ಹೂಡಿರುವುದನ್ನು ಇಲ್ಲಿ ಗಮನಿಸಬವುದು. ಈ ವಿಚಾರದ ಸಂಬಂಧವಾಗಿ ಹೆಗ್ಗಡದೇವನಕೋಟೆ ಪ್ರದೇಶದ ಸಮಾಜ, ಸಂಸ್ಕೃತಿಕ, ಧರ್ಮ, ಸ್ಥಳ ಪುರಾಣಗಳ ಬಗ್ಗೆ ಅಧ್ಯಯನ ನಡೆಸುತ್ತಿರುವ ಮತ್ತು ಅಧಿಕೃತವಾಗಿ ಮಾತನಾಡಬಲ್ಲ ಶ್ರೀರಾಜಾಹೊಸಮಾಳ, ಶ್ರೀಕ್ಷೀರಸಾಗರ, ಶ್ರೀಅನಂತ್‌ಭಾಸ್ಕರ್ ಕೆ. ವಿ. ಮೊದಲಾದವರನ್ನು ಭೇಟಿಮಾಡಿ ಸಂದರ್ಶನ ಹಾಗೂ ಮೌಖಿಕ ಇತಿಹಾಸದ ಅನ್ವಯ ಹಲವು ಮಾಹಿತಿಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಡೆದುಕೊಳ್ಳಲಾಗಿದೆ. ಹೀಗೆ ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಜೈನಧರ್ಮವು ಬಹಳ ಜನಪ್ರಿಯಗೊಂಡು ಕಿತ್ತೂರು, ಕಳಸೂರು, ಮನಹಳ್ಳಿ, ಚಿನಹಳ್ಳಿ, ಭೀಮನಕೊಲ್ಲಿ, ಸರಗೂರು ಮೊದಲಾದವುಗಳು ಈ ಧರ್ಮದ ಪ್ರಮುಖ ಕ್ಷೇತ್ರಗಳಾಗಿ ಅಭಿವೃದ್ಧಿ ಹೊಂದಿದ್ದವು.[17]

**ಕಿತ್ತೂರು ಅಥವಾ ಕೀರ್ತಿಪುರ**

ಕಿತ್ತೂರು ಅಥವಾ ಕೀರ್ತಿಪುರವು ಪ್ರಾಚೀನ ಪುನ್ನಾಟ ರಾಜ್ಯದ ರಾಜಧಾನಿ ಇದಾಗಿತ್ತು. ಇಂದು ಕಬಿನಿ ಜಲಾಶಯದ ತೆರಣಿಮಂಟಿ ಸಮೀಪದ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಈ ನಗರವು ಆಡಳಿತ, ವ್ಯಾಪಾರ, ಧಾರ್ಮಿಕ ಹಾಗೂ ಕಲಾ ಕೇಂದ್ರವಾಗಿತ್ತೆಂಬುದಾಗಿ ತಿಳಿದುಬರುತ್ತದೆ. ಈ ಊರಿನಲ್ಲಿ ಕಂಡುಬರುವ ಪ್ರಮುಖ ಜೈನ ದೇವಾಲಯವೆಂದರೆ ಶ್ರೀರಾಮೇಶ್ವರ ದೇವಾಲಯ ಅಥವಾ ರವಿ ರಾಮೇಶ್ವರ ದೇವಾಲಯ. ಪಾಳುಬಿದ್ದ ಜೈನಧರ್ಮದ ಬಸದಿಗಳು, ಪಾರ್ಶ್ವನಾಥ ತೀರ್ಥಂಕರರ ಸುಂದರವಾದ ಕಲ್ಲಿನ

ವಿಗ್ರಹ ಮತ್ತು ಸಣ್ಣಸಣ್ಣ ಇತರ ತೀರ್ಥಂಕರರ ವಿಗ್ರಹಗಳಿವೆ. ತೀರ್ಥಂಕರರ ಅನೇಕ ಅವಶೇಷಗಳು ಇಲ್ಲಿ ಈಗಲೂ ಕಂಡುಬರುತ್ತವೆ.[18]

ಶ್ರೀರಾಮೇಶ್ವರ ಅಥವಾ ಶ್ರೀರವಿರಾಮೇಶ್ವರ ದೇವಾಲಯ ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯದವರು ಹೊರತಂದಿರುವ 1931 ಮತ್ತು 1931ನೇ ಮೈಸೂರು ಅರ್ಕಿಯಾಲಾಜಿಕಲ್ ರಿಪೋರ್ಟ್ಸ್ (ವರದಿ) ಗಳಲ್ಲಿ ಈ ದೇವಾಲಯದ ಬಗ್ಗೆ ವಿವರವಾದ ಮಾಹಿತಿಗಳಿವೆ. ಕಿತ್ತೂರಿನ ಮಧ್ಯಭಾಗದಲ್ಲಿ ಪೂರ್ವಪಶ್ಚಿಮಾಭಿಮುಖವಾಗಿ ನೆಲೆ ನಿಂತಿರುವ ಈ ದೇವಾಲಯದ ಸುತ್ತಲೂ ಇಟ್ಟಿಗೆಗಳಿಂದ ನಿರ್ಮಿಸಿರುವ ಅವರಣ ಗೋಡೆಯಿದೆ. ಅವರಣದ ನಾಲ್ಕು ಮೂಲೆಗಳಲ್ಲೂ ಸುಂದರವಾದ ನಾಲ್ಕು ನಂದಿಗಳನ್ನು ಸ್ಥಾಪಿಸಲಾಗಿದೆ. ಮೂರು ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ.[19] ಸ್ಥಳೀಯರು ಅಭಿಪ್ರಾಯಪಡುವ ಪ್ರಕಾರ ಈ ದೇವಾಲಯ ಅಪಾರ ಶ್ರೀಮಂತವಾಗಿದ್ದು. ಹಲವು ಭಾರಿ ಆಕ್ರಮಣಕಾರರ ಮತ್ತು ದರೋಡೆಕಾರರ ದಾಳಿಗಳಿಗೆ ತುತ್ತಾಗಿವೆ ಎಂಬುದಾಗಿ ಈ ದೇವಾಲಯದ ಪ್ರಧಾನ ಅರ್ಚಕರಾದ ಭಾಸ್ಕರ್‌ರವರು ಕ್ಷೇತ್ರಕಾರ್ಯದ ಭೇಟಿಯ ಸಂದರ್ಭದಲ್ಲಿ ತಿಳಿಸಿದರು.[20]

ರವಿರಾಮೇಶ್ವರ ದೇವಾಲಯದ ಮುಂಭಾಗದಲ್ಲಿ ಎರಡು ಶಿಲಾಶಾಸನಗಳನ್ನು ನಿಲ್ಲಿಸಲಾಗಿದೆ. ದೇವಾಲಯದ ಪೂರ್ವದ ಕಡೆ ಅನತಿ ದೂರದಲ್ಲಿ ಪಾರ್ಶ್ವನಾಥ ತೀರ್ಥಂಕರರ ಸುಂದರವಾದ ಕಲ್ಲಿನ ವಿಗ್ರಹವಿದೆ. ಅದರ ಪಕ್ಕದಲ್ಲಿಯೇ ಮತ್ತೊಂದು ಸಣ್ಣದಾದ ತೀರ್ಥಂಕರರ ವಿಗ್ರಹವಿದೆ.[21] ಕಿತ್ತೂರಿನಲ್ಲಿರುವ ಶ್ರೀಪಾರ್ಶ್ವನಾಥಸ್ವಾಮಿಯವರಿಗೆ ಅರಮನೆ ಲಕ್ಷ್ಮೀಪತಿ ಪಂಡಿತ ರವರ ಧರ್ಮಪತ್ನಿಯವರಾದ ಲಕ್ಷ್ಮೀಮಂತ್ಯಂಮನವರು ಚೌರಿಗೆ, ಪಾತ್ರೆ ಪದಾರ್ಥಗಳನ್ನು ದಾನ ನೀಡಿರುವುದು. ಹೆ.ಕೋ.127ನೇ ಕಿತ್ತೂರು ಶಾಸನದಲ್ಲಿ ದಾಖಲಾಗಿದೆ.[22] ಹೆ.ಕೋ.128ನೇ ಕಿತ್ತೂರು ಶಾಸನದ ಪ್ರಕಾರ ಕಿತ್ತೂರ ವಿಜಯಪಾರ್ಶ್ವನಾಥ ಸ್ವಾಮಿಗೆ ಬೆಳುಕೆರೆ ಶಾಂತಪಡಿತರ ಧರ್ಮಪತ್ನಿ ದೇವೆಂಮ್ಮ ದಾನ ನೀಡಿದ ಚೌರಿಗೆಯ ಬಗೆಗೆ ವಿವರಣೆಯಿದ್ದರೆ.[23] ಅದೇ ಬಸದಿಯ ಕೊಳಗದಪ್ಪಲೆಯನ್ನು ದಾನ ನೀಡಿದ ಶ್ರೀ ಬಿಳಕೆರೆ ದೇವರಾಜೈಯರ ಬಗೆಗೆ ಹೆ.ಕೋ.129ನೇ ಶಾಸನದಲ್ಲೂ,[24] ಜಿನ್ನೈನವರ ಧರ್ಮಪತ್ನಿ ಜಯಾವತ್ತಿ ಅಮ್ಮನವರು ನೀಡಿದ ಹಿತ್ತಾಳೆ ತಟ್ಟೆಯ ದಾನದ ಬಗೆಗೆ ಹೆ.ಕೋ130ನೇ ಕಿತ್ತೂರು ಶಾಸನದಲ್ಲಿಯೂ ಕಂಡುಬರುತ್ತದೆ.[25] ಕ್ರಿ.ಶ.12ನೇ ಶತಮಾನಕ್ಕೆ ಸೇರಿದ ಕಿತ್ತೂರಿನ ಬಸದಿಯ ಮೂಲದೇವರಾದ ವಿಜಯಪಾರ್ಶ್ವನಾಥಸ್ವಾಮಿ ವಿಗ್ರಹದ ಪಾದದ ಕೆಳಗಿರುವ ಹೆ.ಕೋ.131ನೇ ಶಾಸನದ ಪ್ರಕಾರ ಶ್ರೀ ಮೂಲಸಂಘ ಕಾನೂರ್ಗಣ ತಿಂತ್ರಿಣಿಗಚ್ಛ ಕುಂದಕುಂದಾನ್ವಯ ಸುಪೂಜ್ಯದೇವ ಪುಷ್ಟ ಯವತಿಯಕಿಯವರು ಪಾರ್ಶ್ವನಾಥ ಬಸದಿಯಲ್ಲಿ ವಿಜಯನಾಥಸ್ವಾಮಿಯನ್ನು ಪ್ರತಿಷ್ಠಾಪಿಸಿದುದರ ಬಗ್ಗೆ ವ್ಯಕ್ತವಾಗುತ್ತದೆ.[26]

ಇತ್ತೀಚಿನ ಪುರಾತತ್ವೀಯ ಸಂಶೋಧನೆಗಳ ಆಧಾರದ ಮೇರೆಗೆ ಈ ಜೈನ ಕ್ಷೇತ್ರ ಹಾಗೂ ಜೈನ ಧರ್ಮದ ಸ್ಮಾರಕಗಳು ಹನ್ನೆರಡನೆ ಶತಮಾನದಲ್ಲಿ ಕಟ್ಟಾ ಶೈವಪಂಥದ ಪ್ರತಿಪಾದಕರಾಗಿದ್ದ ಚೋಳರ ಪ್ರಭಾವದಿಂದ ಈ ಕ್ಷೇತ್ರವು ಶೈವ ಕೇಂದ್ರವಾಗಿಯೂ ಮತ್ತು ಜೈನ ಸ್ಮಾರಕಗಳು ಶೈವ ಪಂಥದ ಲಕ್ಷಣಗಳನ್ನು ಸೇರ್ಪಡಿಸಿಕೊಂಡು ತಮ್ಮ ಮೂಲ ಲಕ್ಷಣಗಳನ್ನು ಕಳೆದುಕೊಂಡವೆಂಬ ಅಭಿಪ್ರಾಯಗಳು ಕೇಳಿಬರುತ್ತಿವೆ.[27]

**ಸರಗೂರು**

ಸರಗೂರು ಪಟ್ಟಣವು ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಕಂಡುಬರುವ ಬಹಳ ಪ್ರಮುಖ ರಾಜಕೀಯ ಹಾಗೂ ವಾಣಿಜ್ಯ ಕೇಂದ್ರವಾಗಿದೆ. ಎರಡನೇ ದೊಡ್ಡ ಪಟ್ಟಣವಾಗಿರುವ ಸರಗೂರಿನಲ್ಲಿ ಶಾಸನಗಳು ಹಾಗೂ ಪುರಾತತ್ವೀಯ ಸ್ಮಾರಕಗಳು ಕಂಡುಬಂದಿವೆ. ಇತ್ತೀಚೆಗೆ ಕ್ರಿ.ಶ. 2017ರಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕನ್ನು ವಿಭಜಿಸಿ, ಸರಗೂರು ಪಟ್ಟಣವನ್ನು ಹೊಸ ತಾಲ್ಲೂಕನ್ನಾಗಿ ಮಾಡಲಾಗಿದೆ. ಇಲ್ಲಿ ಶೈವ ವೈಷ್ಣವ ಪಂಥಗಳಿಗೆ ಸೇರಿದ ದೇವಾಲಯಗಳು ವಿಶೇಷವಾಗಿ ಜೈನ ಬಸದಿ, ಪಾರ್ಶ್ವನಾಥ ತೀರ್ಥಂಕರ ಹಾಗೂ ಸಣ್ಣ ಸಣ್ಣ ಇತರ ತೀರ್ಥಂಕರರ ವಿಗ್ರಹಗಳು ಸಹ ಕಂಡುಬಂದಿವೆ.[28]

ಜೈನ ಬಸದಿ ಹಾಗೂ ತೀರ್ಥಂಕರರ ವಿಗ್ರಹಗಳು: ಸರಗೂರು ಪಟ್ಟಣದಲ್ಲಿ ಜೈನ ಬಸದಿ, ಪಾರ್ಶ್ವನಾಥ ತೀರ್ಥಂಕರ ಇತರ ತೀರ್ಥಂಕರರ ವಿಗ್ರಹಗಳು ದೊರಕಿವೆ. ಈಗ ಆಧುನಿಕ ರೀತಿಯಲ್ಲಿ ಪುನರ್ ನಿರ್ಮಾಣಗೊಂಡಿರುವ ಬಸದಿಯು ಈ ಹಿಂದೆ ಗಂಗರ ಕಾಲದಲ್ಲಿಯೇ ನಿರ್ಮಾಣಗೊಂಡಿರುವ ಕೆಲವು ಲಕ್ಷಣಗಳು ಕಂಡುಬರುತ್ತವೆ. ಬಸದಿಯ ಒಳಗೆ ಪ್ರತಿಷ್ಠಾಪಿರುವ ಆದಿ ತೀರ್ಥಂಕರರ ವಿಗ್ರಹ ಹಾಗೂ ಬಸದಿಯ ಎದುರುಗಡೆ ಕಂಡು ಬರುವ ಪಾರ್ಶ್ವನಾಥ ಹಾಗೂ ಚಂದ್ರನಾಥ ವಿಗ್ರಹಗಳು ಆಕರ್ಷಕವಾಗಿವೆ.

ಹತ್ತೊಂಬತ್ತನೆ ಶತಮಾನಕ್ಕೆ ಸೇರಿದ ಹೆ.ಕೋ. 132ನೇ ಶಾಸನದಲ್ಲಿ ಹುರದ ಅಂಗರಾಜವೊಡೆಯ ಕೊಟ್ಟಿರುವ ದಾನದ ಬಗ್ಗೆ ಮಾಹಿತಿಯಿದೆ.[29] ಹೆ.ಕೋ.12ನೇ ಕೊತ್ತೆಗಾಲ ಶಾಸನದ ಪ್ರಕಾರ ಹಾಳಾಗಿದ್ದ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಸಿ, ಅದನ್ನು ಸರಿಪಡಿಸಿ ಅಲ್ಲಿ ಪೂಜೆಪುನಸ್ಕಾರಗಳು ಸಾಂಗ್ಯವಾಗಿ ನಡೆದುಕೊಂಡು ಹೋಗಲು ಏರ್ಪಾಡು ಮಾಡಿದ ಕರಿಜಯನ ಮಲ್ಲಪ್ಪಂಗೆ ಧಾರಾಪೂರ್ವಕವಾಗಿ ಬಿಟ್ಟ ಗದ್ದೆಬೆದ್ದಲು ಭೂದಾನದ ಬಗ್ಗೆ ಕಂಡುಬರುತ್ತದೆ.[30]

**ಹೆಬ್ಬಲಗುಪ್ಪೆ**

**ದುಗ್ಗಮಾರ ಬಸದಿ** : ಹೆಬ್ಬಲಗುಪ್ಪೆಯಲ್ಲಿ ಜೈನ ಬಸದಿ, ಪಾರ್ಶ್ವನಾಥ ತೀರ್ಥಂಕರ ಹಾಗೂ ಇತರ ತೀರ್ಥಂಕರ ಹಾಗೂ ಇತರ ತೀರ್ಥಂಕರರ ವಿಗ್ರಹಗಳು ಸಹ ಇವೆ.[31] ಹೆ.ಕೋ.63ನೇ ಹೆಬ್ಬಲಗುಪ್ಪೆಯ ಶಾಸನದಲ್ಲಿ ನಾರಾಯಣ ಪೆರುನ್ತಚ್ಚನ್‌ರವರು ನಿರ್ಮಿಸಿದ ದುಗ್ಗಮಾರ ಬಸದಿಗೆ ನರಸೀಗೆರೆ ಅಪ್ಪೊರ್

ನೀಡಿದ ಆರು ಖಂಡುಗ ಬಿತ್ತುವ ಭೂದಾನ ಮತ್ತು ಗೊಯ್ಯಿನ್ನಮ್ಮ ಎಂಬುವವರು ನೀಡಿದ ಆರು ಖಂಡುಗ ಬಿತ್ತುವ ನೀರಾವರಿ ಭೂಮಿಯ ಭೂದಾನಗಳನ್ನು ನೀಡಿರುವುದು ಕಂಡುಬರುತ್ತದೆ.[32]

**ಕಳಸೂರು**

ಕಿತ್ತೂರಿನಂತೆ ಕಳಸೂರು ಸಹ ಜೈನ ಕೇಂದ್ರವಾಗಿತ್ತೆಂಬುದಕ್ಕೆ ಇಲ್ಲಿ ದೊರೆತ್ತಿರುವ ಬಸದಿ ಹಾಗೂ ಇತರ ತೀರ್ಥಂಕರರ ವಿಗ್ರಹಗಳು ಸಾಕ್ಷಿಯಾಗಿವೆ. ಕಬಿನಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾದ ನಂತರ ದೊರೆತ ಜೈನ ತೀರ್ಥಂಕರ ವಿಗ್ರಹಗಳು ಮತ್ತು ಜೈನಧರ್ಮಕ್ಕೆ ಸಂಬಂಧಿಸಿದ ಮೂಲ ವಿಗ್ರಹಗಳನ್ನು ತಂದು ಕಳಸೂರಿನ ಎತ್ತರವಾದ ಪ್ರದೇಶದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ಇತ್ತೀಚೆಗೆ ಆಧುನಿಕ ಮಾದರಿಯ ಬಸದಿಗಳನ್ನು ಸಹ ನಿರ್ಮಿಸಲಾಗಿದೆ. ಅದೇ ರೀತಿ ಮಳಲಿ ಗ್ರಾಮದ ಜನರನ್ನು ಒಕ್ಕಲೆಬ್ಬಿಸಿದಾಗ ಅಲ್ಲಿನ ಪದ್ಮಾವತಿ ಜೈನ ಬಸದಿಯಲ್ಲಿ ದೊರೆತ ಮೂಲ ವಿಗ್ರಹಗಳು ಮತ್ತು ತೀರ್ಥಂಕರರ ವಿಗ್ರಹಗಳನ್ನು ಸಹ ತಂದು ಕಳಸೂರಿನ ಬಸದಿಯಲ್ಲಿ ಪ್ರತಿಷ್ಠಾಪಿಸಲಾಗಿದೆ.[33]

**ಮಳಲಿ**

ಇದು ಸಹ ಜೈನ ಕೇಂದ್ರವಾಗಿತ್ತೆಂಬುದಕ್ಕೆ ಇಲ್ಲಿ ನಿರ್ಮಾಣಗೊಂಡಿರುವ ಎರಡು ಸುಂದರವಾದ ಜೈನ ಬಸದಿ ಹಾಗೂ ಇತರ ತೀರ್ಥಂಕರ ವಿಗ್ರಹಗಳು ಸಾಕ್ಷಿಯಾಗಿವೆ. ಮೂಲ ವಿಗ್ರಹಗಳು ಮತ್ತು ಇತರ ತೀರ್ಥಂಕರರ ವಿಗ್ರಹಗಳು ಸುಂದರವಾಗಿವೆ.[34]

**ಶಾಂತಿನಾಥ ಬಸದಿ** : ಸರಗೂರಿನ ಜೈನರ ಬೀದಿಯಲ್ಲಿ ನಿರ್ಮಾಣವಾಗಿರುವ ಈ ಬಸದಿಯನ್ನು ಇತ್ತೀಚೆಗೆ ಆಧುನಿಕ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ. ಈ ಬಸದಿಯು ಆಕಾರದಲ್ಲಿ ಚಿಕ್ಕದಾಗಿದ್ದರೂ ವಾಸ್ತುಶಿಲ್ಪ ಶೈಲಿಯಲ್ಲಿ ಬಹಳ ಸುಂದರವಾಗಿದೆ. ಮೂಲ ವಿಗ್ರಹ ವೃಷಭನಾಥ ತೀರ್ಥಂಕರರದಾಗಿದ್ದು. ಪಾರ್ಶ್ವನಾಥ ಮತ್ತು ಇತರ ತೀರ್ಥಂಕರರ ವಿಗ್ರಹಗಳು ಸಹ ಪ್ರತಿಷ್ಟಾಪಿಸಲ್ಪಟ್ಟಿವೆ.[35] ಹತ್ತೊಂಬತ್ತನೆ ಶತಮಾನಕ್ಕೆ ಸೇರಿದ ಹೆ.ಕೋ.159ನೇ ಶಾಸನದಲ್ಲಿ ಸರಗೂರಿನ ಲಿಂಗರಾಜವೊಡೆಯ ಕೊಟ್ಟಿರುವ ದಾನದ ಬಗ್ಗೆ ಮಾಹಿತಿಯಿದೆ.[36] ಹೆ.ಕೋ.124ನೇ ಸರಗೂರಿನ ಶಾಸನದ ಪ್ರಕಾರ ಹಾಳಾಗಿದ್ದ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿ, ಅದನ್ನು ಸರಿಪಡಿಸಿ ಅಲ್ಲಿ ಪೂಜೆಪುನಸ್ಕಾರಗಳು ಸಾಂಗ್ಯವಾಗಿ ನಡೆದುಕೊಂಡು ಹೋಗಲು ಏರ್ಪಾಡು ಮಾಡಿ, ಧಾರಾಪೂರ್ವಕವಾಗಿ ಬಿಟ್ಟ ಗದ್ದೆಬೆದ್ದಲು ಭೂದಾನದ ಬಗ್ಗೆ ಕಂಡುಬರುತ್ತದೆ.[37]

ಹೀಗೆ ವ್ಯಾಪಕವಾಗಿ ಬೆಳೆದ ಜೈನ ಧರ್ಮದ ಪ್ರಭಾವವು ಹನ್ನೆರಡನೇ ಶತಮಾನದ ಅಂತ್ಯದಿಂದ ಕರ್ನಾಟಕದಲ್ಲಿ ಇಳಿಮುಖವಾದುದನ್ನು ಗುರುತಿಸಬಹುದು. ಏಕೆಂದರೆ ಕಾಲಕ್ರಮೇಣ ವೈದಿಕ ಧರ್ಮದ ಶೈವವೈಷ್ಣವ ಪಂಥಗಳ ಜೊತೆಗೆ ವೀರಶೈವ ಪಂಥವು ಸಹ ಪ್ರಬಲವಾಗುತ್ತಾ ಬಂದಿತು. ಜೈನ ಧರ್ಮವು

ಕಾಲಕ್ರಮೇಣ ಜನಸಾಮಾನ್ಯರ ಬೆಂಬಲವನ್ನು ಉಳಿಸಿಕೊಳ್ಳಲಾಗಲಿಲ್ಲ. ರಾಜಮನೆತಗಳು ಸರ್ವಧರ್ಮ ಸಮಾನತೆಯ ನೀತಿಯನ್ನು ಮುಂದುವರಿಸಿಕೊಂಡು ಬಂದರೂ ಸಹ ಸಾರ್ವತ್ರಿಕ ಸಮಾಜದಲ್ಲಿ ವಿವಿಧ ಧಾರ್ಮಿಕ ಪಂಥಗಳ ಪೈಪೋಟಿ ಪ್ರಾರಂಭವಾಯಿತು. ಜೈನ ಸಂಘ–ಸಂಸ್ಥೆಗಳ ಮೇಲೆ ಯಥೇಚ್ಛ ದಾಳಿಗಳೇನು ನಡೆಯದಿದ್ದರೂ ಸಹ ಬೆಂಬಲದ ಕ್ಷೀಣತೆಯು ಗಮನಾರ್ಹವಾಗಿ ಕಂಡಬರುತ್ತದೆ. ಇದರಿಂದ ಅದುವರೆಗೂ ಅಧಿಕ ಸಂಖ್ಯೆಯಲ್ಲಿ ಪ್ರತಿಸ್ಥಾಪಿತವಾಗುತ್ತಿದ್ದ ಜೈನ ಶಾಸನಗಳ ಸಂಖ್ಯೆಯೂ ಕ್ಷೀಣಿಸತೊಡಗಿತು. ಅನೇಕ ಜೈನ ಬಸದಿಗಳು ಶಿವಾಲಯಗಳಾಗಿ ಮಾರ್ಪಾಟು ಹೊಂದಿದವು.

ಸುಮಾರು 13ನೆಯ ಶತಮಾನದ ಶಾಸನವು ಲಕುಳೀಶ ಸಿದ್ಧಾತಕ್ಕೆ ಸೇರಿದ ಶೈವರು ಅಂದರೆ ಎಕ್ಕೋಟಿ ಮಹಾರುದ್ರರು ಬಸದಿಯೊಂದಕ್ಕೆ ಎಕ್ಕೋಟಿ ಜಿನಾಲಯವೆಂದು ಹೆಸರಿಟ್ಟು ಆ ಜಿನಾಲಯಕ್ಕೆ ಭೇರಿಯೂ ಸೇರಿದಂತೆ ಪಂಚಮಹಾಶಬ್ದಗಳನ್ನು ಕೊಟ್ಟರೆಂಬ ವಿಷಯವನ್ನು ನಿರೂಪಿಸಿದೆ. ಆ ಸಂದರ್ಭದಲ್ಲಿ ಬಸದಿಯ ಮೇಲೆ ಸಿಂಹ, ಚಕ್ರ, ಗಂಡೆ ಮತ್ತು ಭೇರಿಗಳ ಚಿಹ್ನೆಗಳನ್ನು ಹಾಕಿಸಿದರು. ಬಸದಿಯ ಹೊರವಿನ್ಯಾಸದಲ್ಲಿ ಉಂಟಾದ ಬದಲಾವಣೆಯನ್ನು ಇದರಿಂದ ಸೂಚಿಸುತ್ತದೆ. ಇದರಿಂದ ಶೈವ ಆಚಾರ್ಯರು ಈ ಬಸದಿಯ ಮೇಲೆ ಅಧಿಕಾರವನ್ನು ಪಡೆದಿರಬಹುದು. ಇದು ಆ ಕಾಲದಲ್ಲಿ ಹೊಸ ಮಾದರಿಯ ಶೈವ ಸಂಪ್ರದಾಯವು ಪ್ರಬಲ ವಾಗುತ್ತಿದ್ದು, ಜೈನ ಧರ್ಮವು ತನ್ನ ಪ್ರತಿಸ್ಪರ್ಧಿಯನ್ನು ಎದುರಿಸಬೇಕಾಯಿತ್ತೆಂಬುದು ಈ ಘಟನೆಯಿಂದ ಸ್ಪಷ್ಟವಾಗುತ್ತದೆ.[38] ಈ ಹಿನ್ನೆಲೆಯಲ್ಲಿ ಹೆಗ್ಗಡದೇವನಕೋಟೆ ಪ್ರದೇಶದ ಜೈನರು ಶೈವಪಂಥದ ನಾಮಧಾರಿಗೌಡರಾಗಿ ಸಾಮಾಜಿಕ ಬದಲಾವಣೆ ಹೊಂದಿರುವ ಘಟನೆಯನ್ನು ಪರಿಶೀಲಿಸಲಾಗಿದೆ.

ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಅಧಿಕವಾಗಿ ಕಂಡುಬರುವ ನಾಮಧಾರಿಗೌಡ ಜನಾಂಗದವರು ಸಾಮಾಜಿಕ ಬದಲಾವಣೆ ಅಥವಾ ಪರಿವರ್ತನೆಯ ಇತಿಹಾಸವು ಅತ್ಯಂತ ಕುತೂಹಲಕಾರಿಯಾಗಿದೆ. ಸಾಮಾಜಿಕ ಹಾಗೂ ಧಾರ್ಮಿಕ ಪರಿವರ್ತನೆಗಳು, ಸಾಂಸ್ಕೃತಿಕ ಪರಿವರ್ತನೆಗೆ ಹೇಗೆ ಕಾರಣವಾಗುತ್ತವೆ. ಎಂಬುದನ್ನು ಈ ಪ್ರದೇಶದ ನಾಮಧಾರಿಗೌಡ ಜನಾಂಗದವರು ಜೈನಧರ್ಮವನ್ನು ತೊರೆದು ಶೈವಪಂಥಾವಲಂಭಿಗಳಾದ ಘಟನೆಯಿಂದ ಕಂಡುಕೊಳ್ಳಬಹುದು. ಇದನ್ನು ಕುರಿತಂತೆ ಕೆಲವು ವಿಷಯಗಳನ್ನು ಮುಂದೆ ಪ್ರಸ್ತಾಪಿಸಲಾಗಿದೆ. ಈ ಪ್ರದೇಶದಾದ್ಯಂತ ಸರಿಸುಮಾರು ಹತ್ತು ಸಾವಿರಕ್ಕೂ ಮೀರಿ ನಾಮಧಾರಿ ಜನಾಂಗದವರು ವಾಸಮಾಡುತ್ತಿದ್ದಾರೆ. ಒಕ್ಕಲುತನ ಇವರ ಮುಖ್ಯ ಕಸುಬಾಗಿದ್ದು, ಇತರ ಒಕ್ಕಲು ಜನಾಂಗದವರಂತೆ ಇವರು ಮಾಂಸಾಹಾರ ಸೇವಿಸದಿರುವುದು ಮತ್ತು ಪೂಜೆಪುನಸ್ಕಾರ ಮುಂತಾದ ಪುರೋಹಿತಶಾಹಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಿದಾಗ ಇವರು ಜೈನ ಧರ್ಮದ ಅಹಿಂಸಾ ತತ್ವವನ್ನು ಮುಂದುವರಿಸಿಕೊಂಡು ಬಂದಿರುವುದು ಆಶ್ಚರ್ಯಕರವಾಗಿ ಕಂಡುಬರುತ್ತದೆ.[39]

ಹೀಗೆ ಜೈನ ಧರ್ಮವು ಈ ಪ್ರದೇಶದ ವ್ಯಾಪ್ತಿಯಲ್ಲಿ ಆಳುವ ಮತ್ತು ಅಧಿಕಾರ ವರ್ಗದವರು, ಶ್ರೀಮಂತ ವರ್ತಕರು ಮುಂತಾದವರಿಂದ ಪ್ರೋತ್ಸಾಹ ಪಡೆದು ಜನಪ್ರಿಯ ಧಾರ್ಮಿಕ ಪಂಥವಾಗಿ ಪ್ರಸಾರಗೊಂಡಿತು. ಕಾಲಕ್ರಮೇಣ ಹಲವಾರು ಕಾರಣಗಳಿಂದ ಈ ಧರ್ಮವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡರೂ ಈ ಪ್ರದೇಶದ ಸಮಾಜ, ಧರ್ಮ, ಸಾಹಿತ್ಯ, ಕಲೆವಾಸ್ತುಶಿಲ್ಪ, ವ್ಯಾಪಾರ-ವಾಣಿಜ್ಯ ಮತ್ತು ಜನಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿರುವುದನ್ನು ಈಗಲೂ ನಾವು ಕಾಣಬಹುದು.

**ಅಡಿಟಿಪ್ಪಣಿ**

1. ಹರಿಷೇಣಾಚಾರ್ಯ : ಬೃಹತ್ ಕಥಾಕೋಶ, ಕಥಾ ಸಂ. 131, ಪು.ಸಂ.930-932
2. ರಂಗಸ್ವಾಮಯ್ಯ ಜಿ.ಆರ್. ಕರ್ನಾಟಕದ ಸಂಕ್ಷಿಪ್ತ ಚರಿತ್ರೆ, ಮೈಸೂರು. 1992. ಪು.ಸಂ.216-219
3. ರಂಗಸ್ವಾಮಯ್ಯ ಜಿ.ಆರ್. ಕರ್ನಾಟಕದ ಸಂಕ್ಷಿಪ್ತ ಚರಿತ್ರೆ, ಮೈಸೂರು. 1992. ಪು.ಸಂ.216-219
4. ಎ. ಕ. ಸಂ-4. ಚಾ.ನ. 2 & 3
5. ಎಪಿಗ್ರಾಫಿಯ ಕರ್ನಾಟಕ, ಪರಿಷ್ಕೃತ ಸಂಪುಟ-3. ಬೆಂಗಳೂರು. 1975
6. ಎ. ಕ. ಸಂ-3. ಹೆ.ಕೋ. 63
7. ಅದೇ. ಹೆ. ಕೋ. 127
8. ಅದೇ. ಹೆ. ಕೋ. 128
9. ಅದೇ. ಹೆ. ಕೋ. 129
10. ಅದೇ. ಹೆ. ಕೋ. 130
11. ಅದೇ. ಹೆ. ಕೋ. 131
12. ಅದೇ. ಹೆ. ಕೋ. 132
13. ಅದೇ. ಹೆ. ಕೋ. 12
14. ಹಯವದನರಾವ್. ಸಿ., ಮೈಸೂರು ಗೆಜೆಟಿಯರ್ಸ್, ಸಂ. 5 ಬೆಂಗಳೂರು. 1930. ಪು. ಸಂ. 286-287
15. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾದ ಮಾಹಿತಿಗಳು
16. ಹರಿಷೇಣಾಚಾರ್ಯ : ಬೃಹತ್ ಕಥಾಕೋಶ. ಕಥಾ ಸಂ. 131, ಪು.ಸಂ. 931

17. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾದ ಮಾಹಿತಿಗಳು

18. ಅದೇ

19. ಎಂ.ಎ.ಆರ್–1931. ಪು. 67 & 1937. ಪು. 7

20. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾದ ಮಾಹಿತಿಗಳು

21. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾದ ಮಾಹಿತಿಗಳು

22. ಎ. ಕ. ಸಂ–3. ಹೆ. ಕೋ. 127

23. ಅದೇ. ಹೆ. ಕೋ. 128

24. ಅದೇ. ಹೆ. ಕೋ. 129

25. ಅದೇ. ಹೆ. ಕೋ. 130

26. ಅದೇ. ಹೆ. ಕೋ. 131

27. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾದ ಮಾಹಿತಿಗಳು

28. ಅದೇ

29. ಅದೇ. ಹೆ. ಕೋ. 132

30. ಅದೇ. ಹೆ. ಕೋ. 12

31. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾದ ಮಾಹಿತಿಗಳು

32. ಎ. ಕ. ಸಂ–3. ಹೆ. ಕೋ. 63

33. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾದ ಮಾಹಿತಿಗಳು

34. ಅದೇ

35. ಅದೇ

36. ಎ. ಕ. ಸಂ–3. ಹೆ. ಕೋ. 159

37. ಅದೇ. ಹೆ. ಕೋ. 124

38. ಎ. ಕ. ಸಂ–7. ನಾಮಂ. 31

39. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾದ ಮಾಹಿತಿಗಳು